**ಓ.ಎಸ್. ನಂಃ 158/2025**

**ಪಿ.ಡಬ್ಲ್ಯೂಃ 1**

**ದಿನಾಂಕ 06.07.2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ವಾದಿಯ ಪರ: ಶ್ರೀ.ಎಂ.ಸಿ.ಎಸ್. ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ದಿನಾಂಕಃ 20/09/1965 ರ ನೊಂದಾಯಿತ ಕ್ರಯಪತ್ರದ ದೃಡೀಕೃತ ನಕಲುನ್ನು ನಿಪಿ–1 ಎಂದು, ಋಣಭಾರ ಪ್ರಮಾಣಪತ್ರವನ್ನು ನಿಪಿ–2 ರಿಂದ 4 ಎಂದು, ಇಂಡೆಕ್ಸ್ ಆಫ್ ಲ್ಯಾಂಡ್ಸ್ ನಿಪಿ–5 ಎಂದು, ರೆಕಾರ್ಡ್ಸ್ ಆಫ್ ರೈಟ್ಸ್ ನಿಪಿ–6 ಎಂದು, ಪಹಣಿಗಳನ್ನು ನಿಪಿ–7 ರಿಂದ ನಿಪಿ–18 ಎಂದು ಗುರುತಿಸಲಾಯಿತು.

**ವಾದಿ ಪರ ವಕೀಲರು ಮುಂದುವರೆದ ಮುಖ್ಯ ವಿಚಾರಣೆಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು**

**ಕೆ.ಆರ್.ನಗರ**